ಸ್ಟ್ರಾಟೊ ಕ್ಯುಮುಲಸ್, ಕ್ಯುಮುಲಸ್, ಕ್ಯುಮುಲೊ ನಿಂಬಸ್ (ಕೆಳಸ್ತರ), ಆಲ್ಟೊ ಕ್ಯುಮುಲಸ್, ಅಲ್ಟೊ ಸ್ಟ್ರಾಟಸ್ (ಮಧ್ಯಮ ಸ್ತರ) ಸಿರಸ್, ಸಿರೊ ಕ್ಯುಮುಲಸ್, ಸಿರೊ ಸ್ಟ್ರಾಟಸ್ (ಅತಿ ಎತ್ತರದ) ಇತ್ಯಾದಿ. ಹೀಗೆ ಮೋಡಗಳ ಕರಾರುವಕ್ಕಾದ ವರ್ಗೀಕರಣ ಹಾಗೂ ಗುರುತು ಹಚ್ಚುವುದು ಆಧುನಿಕ ಹವಾಮಾನ ಮುನ್ಸೂಚನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಉದಾಹರಣೆಗೆ, ನೋಡಲು ಹತ್ತಿ ಹಿಂಜಿದಂತೆ ತೋರುವ ಕ್ಯುಮುಲಸ್ ಮುಗಿಲು ಆಕಾಶದಲ್ಲಿ ಹರಡಿದ್ದರೆ ಶುಭ್ರ ಹವಾಮಾನದ ನಿರೀಕ್ಷೆ ಮಾಡಬಹುದು. ನಿಂಬೋಸ್ಟ್ರಾಟಸ್ ಹೆಸರಿನಿಂದ ಗುರುತಿಸಲಾಗುವ ಕಾರ್ಮೋಡಗಳು ತುಂತುರುನಿಂದ ಸಾಧಾರಣ ಮಳೆ ತರುವುದೆಂದು ಅಂದಾಜಿಸಲಾಗುವುದು. ಹಾಗೆಯೇ ಆಕಾಶದಲ್ಲಿ ಕ್ಯುಮುಲೊ ನಿಂಬಸ್ ಮೋಡಗಳು ದಟ್ಟೈಸಿದವೆಂದರೆ ಗುಡುಗು–ಮಿಂಚು ಸಹಿತ ಜಡಿಮಳೆ ನಿಶ್ಚಿತ.

ಈ ಕ್ಯುಮುಲೊನಿಂಬಸ್ ಮೋಡಗಳೆಂದ ಕೂಡಲೇ ನೆನಪಿಗೆ ಬರುವುದು 'ಮೇಘ ಸ್ಫೋಟ' (ಕ್ಲೌಡ್ ಬರ್ಸ್ಟ್) ಎಂಬ ಭಯಹುಟ್ಟಿಸುವ ವಿದ್ಯಮಾನ. ಸೀಮಿತ ವಿಸ್ತೀರ್ಣದಲ್ಲಿ ಕಡಿಮೆ ಅವಧಿಯಲ್ಲಿ ರಣಭೀಕರ ಮಳೆಯಾದಾಗ ಅದಕ್ಕೆ ಮೇಘ ಸ್ಫೋಟ ಕಾರಣವೆನ್ನಬಹುದು. ಸಣ್ಣ ಪ್ರದೇಶದಲ್ಲಿ ಗಂಟೆಗೆ 100 ಮಿಲಿಮೀಟರಿನಷ್ಟು ಮಳೆಯಾದರೆ ಅದಕ್ಕೆ ಮೇಘಸ್ಫೋಟ ಕಾರಣವೆನ್ನಬಹುದು. ದಶಕದ ಹಿಂದೆ ರುದ್ರಪ್ರಯಾಗ, ಹೃಷಿಕೇಶ, ಕೇದಾರ ಮುಂತಾದೆಡೆಗಳಲ್ಲಿ ಸುರಿದು, ಭೀಕರ ಪ್ರವಾಹ, ಗುಡ್ಡ ಕುಸಿತ, ಆಸ್ತಿಪಾಸ್ತಿ ಜೀವಹಾನಿಯ ಅವಾಂತರ ಸೃಷ್ಟಿಸಿದ ಮಹಾಮಳೆ (ಒಂದೇ ರಾತ್ರಿಯಲ್ಲಿ ಸುರಿದ ಮಳೆ 479 ಮಿ.ಮೀ.), 2005ರ ಜುಲೈಯಲ್ಲಿ ಮುಂಬೈಯಲ್ಲಿ ರಂಪ ಸೃಷ್ಟಿಸಿದ ಮಳೆ (10 ಗಂಟೆಯ ಅವಧಿಯಲ್ಲಿ ಸುರಿದ ಮಳೆಯ ಪ್ರಮಾಣ ಬರೋಬ್ಬರಿ 1448 ಮಿ.ಮೀ.), 2015ರ ಡಿಸೆಂಬರ್‌ನಲ್ಲಿ ಚೆನ್ನೈಯನ್ನು ಮುಳುಗಿಸಿದ ಮಳೆ (24 ಗಂಟೆಯಲ್ಲಿ ಸುರಿದ ಮಳೆ 494 ಮಿ.ಮೀ.) – ಇವೆಲ್ಲಕ್ಕೂ ಮೇಘಸ್ಫೋಟವೇ ಕಾರಣವೆನ್ನುತ್ತಾರೆ. 2021ರ ಅಕ್ಟೋಬರ್ 19ರಂದು ಉತ್ತರಾಖಂಡದ ನೈನಿತಾಲ್‌ನಲ್ಲಿ ಮೇಘಸ್ಫೋಟದಿಂದ ಉಂಟಾದ ದಿಢೀರ್ ಪ್ರವಾಹ ಹಾಗೂ ಭೂಕುಸಿತದಲ್ಲಿ ಹಲವರು ಪ್ರಾಣ ಕಳೆದುಕೊಂಡದ್ದು ಇತ್ತೀಚಿನ ದುರಂತ. ಹಿಮಾಚಲಪ್ರದೇಶ, ಜಮ್ಮು–ಕಾಶ್ಮೀರ ಮುಂತಾದ ಹಿಮಾಲಯದ ತಪ್ಪಲು ರಾಜ್ಯಗಳಲ್ಲಿ ಮೇಘಸ್ಫೋಟದ ವರದಿ ಆಗಿಂದಾಗ ಕೇಳಿಬರುತ್ತದೆ. ಉನ್ನತ ಪರ್ವತಶ್ರೇಣಿಗಳಲ್ಲಿ ಮೇಘಸ್ಫೋಟವು ಹಠಾತ್ತಾಗಿ ಸಂಭವಿಸುವ ಸಾಧ್ಯತೆ ಹೆಚ್ಚು; ತತ್ಪರಿಣಾಮದಿಂದಾಗುವ ಅನಾಹುತವೂ ಭೀಕರ. ಆದರೆ ದಕ್ಷಿಣದ ಮುಂಬೈ, ಚೆನ್ನೈ, ಹೈದರಾಬಾದ್... ಎಲ್ಲ ಬಿಡಿ, ತೆಂಕಣದ ತುತ್ತ ತುದಿಯ ಕೇರಳದಲ್ಲೂ ಮೇಘಸ್ಫೋಟ ಸಂಭವಿಸಿ ಊಹಿಸಲಾಗದ ಅನಾಹುತ ಸೃಷ್ಟಿಯಾಗುತ್ತಿರುವುದು ಅತ್ಯಂತ ಕಳವಳಕಾರಿ. ಇದಕ್ಕೆಲ್ಲ ಹವಾಮಾನ ವೈಪರೀತ್ಯವೇ ಕಾರಣ.

ಮಳೆಗಾಲದಲ್ಲಿ ವಿರಳ ಮಳೆಯಾದಾಗ 'ಮೋಡಬಿತ್ತನೆ' ಎಂಬ ಪದವನ್ನು ನಾವು ಕೇಳಿರುತ್ತೇವೆ. ಏನಿದು ಮೋಡಬಿತ್ತನೆ? ಬಾಷ್ಪೀಕರಣ ಕ್ರಿಯೆಯನ್ನು ಉದ್ದೀಪನಗೊಳಿಸುವ ಸಿಲ್ವರ್ ಅಯೊಡೈಡ್ ಅನ್ನು ವಿಮಾನಗಳ ಮೂಲಕ ಕಡಿಮೆ ಸಾಂದ್ರತೆಯಿರುವ ಮೋಡಗಳ ಮೇಲೆ ಎರಚಿ ಕೃತಕವಾಗಿ ಮಳೆಬರಿಸುವ ವೈಜ್ಞಾನಿಕವಾದ ವಿಧಾನವೇ ಮೋಡಬಿತ್ತನೆ. ಇತ್ತೀಚೆಗೆ ಈ ವಿಧಾನದಿಂದ ದುಬೈ ಮತ್ತಿತರ ಎಮಿರೇಟ್‌ಗಳಲ್ಲಿ ಮಳೆ ಬರಿಸಿದ್ದು ಜಾಗತಿಕ ಸುದ್ದಿಯಾಗಿತ್ತು. ನಮ್ಮಲ್ಲೂ ಅನೇಕ ಬಾರಿ ಮೋಡಬಿತ್ತನೆ ಕಾರ್ಯಕ್ರಮವನ್ನು ಸರ್ಕಾರಗಳು ಕೈಗೊಂಡಿದ್ದವಾದರೂ, ಇದರಿಂದ ವ್ಯಾಪಕವಾಗಿ ಮಳೆ ಸುರಿದ ನಿದರ್ಶನಗಳು ಇಲ್ಲ. ಅಲ್ಲದೆ ನೈಸರ್ಗಿಕವಾಗಿ ಸುರಿಯುವ ಮಳೆಗೂ ಕೃತಕ ಮಳೆಗೂ ಸಾಕಷ್ಟು ವ್ಯತ್ಯಾಸವಿದೆ.



ಕವಿಗಳಿಗೆ, ಚಿತ್ರಕಾರರಿಗೆ ಮೋಡಗಳ ಚಿತ್ತಾರ ನೀಡುವ ಸ್ಫೂರ್ತಿ ಅಂತಿಂತದ್ದಲ್ಲ. ಕನ್ನಡದ ಹೆಮ್ಮೆಯ ವರಕವಿ ಬೇಂದ್ರೆ 'ಮುಗಿಲ ಮಾರಿಗೆ ರಾಗ ರತಿಯ ನಂಜ ಏರಿತ್ತ... ಆಗ ಸಂಜೆಯಾಗಿತ್ತ...' ಎಂದರು. 'ಮಣ್ಣಿನ ದೋಣಿ' ಚಿತ್ರಕ್ಕಾಗಿ ರಾಜ್‌ಕುಮಾರ್ 'ಮೇಘ ಬಂತು ಮೇಘ... ಮೇಘ ನೀಲಿಯ ಮೇಘ... ಮೇಘ ಮಲ್ಹಾರ ಮೇಘ...' ಎಂದು ಹಾಡಿದರು. 'ಶೃಂಗಾರ ಕಾವ್ಯ'ದಲ್ಲಿ ರಘುವೀರ್ ಮತ್ತು ಸಿಂಧೂ ಸಾಕ್ಷಾತ್ ಮೇಘಧೂತದ ಯಕ್ಷನಂತೆಯೇ 'ಓ ಮೇಘವೇ ಮೇಘವೇ ಹೋಗಿ ಬಾ... ಈ ಓಲೆಯ ಅವನಿಗೆ ನೀಡಿ ಬಾ...' ಎಂದು ಹಾಡಿ ನರ್ತಿಸಿದರು. 'ಪಯಣ' ಚಿತ್ರಕ್ಕಾಗಿ ಸೋನು ನಿಗಮ್, 'ಮೋಡದ ಒಳಗೆ... ಹನಿಗಳ ಬಳಗ... ಒಂಟಿ ಕಾಲಲಿ ಕಾದು ನಿಂತಿವೆ ಭೂಮಿಗೆ ಬರಲು...' ಎಂದು ಸುಶ್ರಾವ್ಯವಾಗಿ ಹಾಡಿದರು. ಆಕಾಶದಲ್ಲಿ ಕಾರ್ಮೋಡ ದಟ್ಟೈಸಿದಾಗಲೆಲ್ಲ ಲಗಾನ್ ಚಿತ್ರದ 'ಕಾಲೀ ಮೇಘ... ಕಾಲೀ ಮೇಘ...' ಗೀತೆ ನೆನಪಿಗೆ ಬರುತ್ತದೆ. ಬರಗಾಲದಿಂದ ಕಂಗೆಟ್ಟ ಹಳ್ಳಿಮಂದಿ ಆಕಾಶದಲ್ಲಿ ದಟ್ಟೈಸಿದ ಕಾರ್ಮುಗಿಲನ್ನು ಕಂಡು ಮಳೆಗಾಗಿ ಕುಣಿದಾಡುವ ದೃಶ್ಯ ಮನಮುಟ್ಟುತ್ತದೆ. ಈ ಎಲ್ಲಾ ಮಧುರ ಗೀತೆಗಳಿಗೆ ಮೋಡಗಳೇ ಪ್ರೇರಣೆ. ಮೋಡದ ಮೇಲಿನ ಗೀತೆಗಳ ಈ ಪಟ್ಟಿ ಇನ್ನಷ್ಟು ದೊಡ್ಡದಿದೆ.

ಅದೆಲ್ಲ ಸರಿ, ಈಗೇಕೆ ಮುಗಿಲಿನ ಉಸಾಬರಿ? ಪ್ರಸ್ತುತ ಮೊಬೈಲ್‌ಗೆ ದಾಸರಾಗಿರುವ ಜನರು ತಲೆಯೆತ್ತಿ ಆಕಾಶ ನೋಡುವುದನ್ನೇ ಮರೆತು ಬಿಟ್ಟಂತಿದೆ. ರಸ್ತೆಯಲ್ಲಿ ನಡೆಯುವಾಗಲೂ ವಾಟ್ಸ್‌ಆ್ಯಪ್ ಸಂದೇಶ ಕುಟ್ಟುತ್ತ ಜಗವ ಮರೆವ ಮಂದಿಗೆ, ಆಗಸದಲ್ಲಿ ನಡೆಯುವ ವಿದ್ಯಮಾನಕ್ಕೆ ಸಾಕ್ಷಿಯಾಗಲು ಸಮಯವಾದರೂ ಎಲ್ಲಿದೆ? ನಡೆದಾಡುವಾಗಿನ ಸಮಯವನ್ನೂ ಹಾಳುಮಾಡಬಾರದೆನ್ನುವ ಧಾವಂತದ ಈ ದಿನಗಳಲ್ಲಿ ಮೋಡಗಳೆಡೆಗೆ ಸೆಳೆತ ಜನರಲ್ಲಿ ಮೂಡುವುದಾದರೂ ಹೇಗೆ? ಎಳವೆಯಲ್ಲೇ ನಿಸರ್ಗಕ್ಕೆ ಒಡ್ಡಿಕೊಂಡು ಸಹಬಾಳ್ವೆಯ ಪಾಠ ಕಲಿಯಬೇಕಾದ ಮಕ್ಕಳು ತಮ್ಮದಲ್ಲದ ತಪ್ಪಿಗೆ ಅದೇ ನಿಸರ್ಗದೊಂದಿಗಿನ ಒಡನಾಟವನ್ನೇ ಕಳೆದುಕೊಳ್ಳುತ್ತಿರುವುದು ಆಧುನಿಕ ಜಗತ್ತಿನ ದುರಂತ. ಕೊಂಚ ಬಿಡುವು ಮಾಡಿಕೊಂಡು ಮನೆಯಂಗಳಕ್ಕೋ ಟರೇಸ್‌ಗೋ ಚಿಣ್ಣರನ್ನೂ ಕರೆದುಕೊಂಡು ಹೋಗಿ ಬಾನಗಲಕ್ಕೆ ಹರಡಿಕೊಂಡಿರುವ ಮೋಡಗಳ ವರ್ಣಮಯ ಚಿತ್ತಾರವನ್ನು ನೋಡಿ ಮನಸ್ಸು ಹಗುರ ಮಾಡಿಕೊಳ್ಳುವುದಕ್ಕೆ ಇದು ಸಕಾಲ.

ಮನಸ್ಸಿನ ಒತ್ತಡ ಕಳೆದುಕೊಳ್ಳಲು ಪ್ರಕೃತಿಯ ಮಡಿಲನ್ನರಸಿ ದೂರವೆಲ್ಲೋ ಹೋಗಬೇಕಿಲ್ಲ. ಒಮ್ಮೆ ತಲೆಯೆತ್ತಿ, ಮನಬಿಚ್ಚಿ ಮುಗಿಲ ನೋಡಿ. ಅದರ ಜೊತೆಗೆ ಮಾತನಾಡಿ. ನಿಮ್ಮ ಮನಸ್ಸಿನ ದುಗುಡವೂ ಮೋಡಗಳ ಜೊತೆಗೇ ಸರಿದುಹೋಗಿ ನೀಲಿ ನೀಲಿ ಶುಭ್ರ ಆಕಾಶದಂಥ ನಿರುಮ್ಮಳ ಭಾವ ಆವರಿಸದಿದ್ದರೆ ಕೇಳಿ.

ಪ್ರತಿಕ್ರಿಯಿಸಿ: feedback@sudha.co.in